ದೂರವಾಣಿ ಸಂಖ್ಯೆ: 2419208/2419315/361
ಫ್ಯಾಕ್ಸ್: 0821-2419363/2419301

e-mail : registrar@uni-mysore.ac.in
www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ : 1916

ವಿಶ್ವವಿದ್ಯಾನಿಲಯಕಾರ್ಯಸೌಧ,
ಕ್ರಾಫರ್ಡ್ ಭವನ, ಮೈಸೂರು-570005

ದಿನಾಂಕ: 09.02.2021

ಸಂಖ್ಯೆ: ಎಸಿ4/199/2018-19

## ಸುತ್ತೋಲೆ-4

ವಿಷಯ: 2020-21ನೇ ಸಾಲಿಗೆ ಸ್ನಾತಕ ಪದವಿ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ದಿನಾಂಕವನ್ನು ವಿಸ್ತರಿಸಿರುವ ಬಗ್ಗೆ.

ಉಲ್ಲೇಖ: 1. ಈ ಕಛೇರಿಯ ಇದೆ ಸಮ ಸಂಖ್ಯೆಯ ಸುತ್ತೋಲೆ. ದಿನಾಂಕ: 16.12.2020 ರ
2. ಈ ಕಛೇರಿಯ ಇದೆ ಸಮ ಸಂಖ್ಯೆಯ ಸುತ್ತೋಲೆ. ದಿನಾಂಕ: 02-01-2021 ರ
3. ಈ ಕಛೇರಿಯ ಇದೆ ಸಮ ಸಂಖ್ಯೆಯ ಸುತ್ತೋಲೆ ದಿನಾಂಕ: 04.02.2021.
4. ಮಾನ್ಯ ಕುಲಪತಿಗಳ ಅದೇಶದ ದಿನಾಂಕ: 08-02-2021.

*****

ಕೋವಿಡ್-19 ಸಾಂಕ್ರಾಮಿಕ ರೋಗವು ಹರಡುತ್ತಿದ್ದ ಹಿನ್ನೆಲೆಯಲ್ಲಿ ಆರ್ಥಿಕ ಸಂಕಷ್ಟ ಎದುರಾಗಿ ವಿದ್ಯಾರ್ಥಿಗಳು ನಿಗಧಿತ ಸಮಯದಲ್ಲಿ ಶುಲ್ಕವನ್ನು ಪಾವತಿಸಿ ಪ್ರವೇಶಾತಿ ಪಡೆಯಲು ಅನಾನುಕೂಲವಾಗಿರುವುದರಿಂದ ಪ್ರಥಮ, ದ್ವಿತೀಯ ಮತ್ತು ತೃತೀಯ ವರ್ಷದ ಪದವಿ ಕೋರ್ಸ್‌ಗಳಿಗೆ ಪ್ರವೇಶಾತಿ ನೀಡಲು ಅನುಮತಿ ನೀಡಬೇಕೆಂದು ಪೋಷಕರು ಮನವಿ ಸಲ್ಲಿಸುತ್ತಿದ್ದ ಮೇರೆಗೆ, ಮಾನ್ಯ ಕುಲಪತಿಗಳು ಉಲ್ಲೇಖಿತ (3)ರಲ್ಲಿ ಆದೇಶಿಸಿದಂತೆ ಮೈಸೂರು ವಿಶ್ವವಿದ್ಯಾನಿಲಯ ವ್ಯಾಪ್ತಿಯಲ್ಲಿ ಬರುವ ಘಟಕ/ಸಂಯೋಜಿತ ಕಾಲೇಜುಗಳು/ಸ್ವಾಯತ್ತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ತಿಳಿಸುವುದೇನೆಂದರೆ, ಕೋರ್ಸ್‌ವಾರು ಸಂಖ್ಯಾಮಿತಿಯೊಳಗೆ ಸೀಟುಗಳು ಲಭ್ಯವಿದ್ದಲ್ಲಿ ರೂ.800/-ಗಳ ದಂಡ ಶುಲ್ಕದೊಂದಿಗೆ ತಮ್ಮ ಹಂತದಲ್ಲೇ ನಿಯಮಾನುಸಾರ ಎಲ್ಲಾ ಅರ್ಹ ದಾಖಲೆಗಳನ್ನು ಪರಿಶೀಲಿಸಿ, ಪ್ರಥಮ/ದ್ವಿತೀಯ/ತೃತೀಯ ವರ್ಷದ ವಿದ್ಯಾರ್ಥಿಗಳ ಪ್ರವೇಶಾತಿಗೆ **ಅಂತಿಮ ಗಡುವುನೊಂದಿಗೆ** ದಿನಾಂಕ: 12-02-2021ರವರೆಗೆ ವಿಸ್ತರಿಸಲಾಗಿದೆ.

ಪ್ರವೇಶ ಪಡೆದ ವಿದ್ಯಾರ್ಥಿಗಳ ಅಂತಿಮ ಪಟ್ಟಿ ಮತ್ತು ನಿಗಧಿತ ಶುಲ್ಕಗಳನ್ನು (ಈಗಾಗಲೇ ಪ್ರವೇಶಾತಿ ಪಡೆದು ಬಿಟ್ಟುಹೋಗಿರುವ ವಿದ್ಯಾರ್ಥಿಗಳನ್ನು ಹೊರತುಪಡಿಸಿ) ವಿಶ್ವವಿದ್ಯಾನಿಲಯದ ಅನುಮೋದನೆಗೆ ದಿನಾಂಕ: 15-02-2021 ರ ಸಂಜೆ 5.30 ಗಂಟೆಯೊಳಗೆ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವಂತೆ ತಿಳಿಸಲಾಗಿದೆ.

ಉಲ್ಲೇಖ (2) ರಲ್ಲಿ ತಿಳಿಸಿರುವ ಸುತ್ತೋಲೆಯಂತೆ ಈಗಾಗಲೇ ಎಸ್.ಎಸ್ ಪೋರ್ಟ್‌ಲ್‌ಗೆ ಸಲ್ಲಿಸಿರುವ ಮಾಹಿತಿಯಂತೆ ದಿನಾಂಕ: 12.02.2021ರೊಳಗೆ ನೀಡಿದ ಪ್ರವೇಶಾತಿಗಳ ವಿವರವನ್ನು ಕೂಡ ಸದರಿ ಸುತ್ತೋಲೆಯಲ್ಲಿ ತಿಳಿಸಿರುವ ಇ-ಮೇಲ್ ವಿಳಾಸಕ್ಕೆ ಕಳುಹಿಸತಕ್ಕದ್ದು. ( ಸುತ್ತೋಲೆ ಪ್ರತಿ ಲಗತ್ತಿಸಿದೆ)

09/02/2021
ಕುಲಸಚಿವ

Registrar
University of Mysore
Mysore-570 005

ಗೆ,

1. ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಎಲ್ಲಾ ಸ್ನಾತಕ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ - ಮುಂದಿನ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದೆ.
2. ಕುಲಸಚಿವರು (ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಮೌಲ್ಯಭವನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ಪ್ರೊ. ಸುರೇಶ್, ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು. - ವೆಬ್‌ಸೈಟ್ ನಲ್ಲಿ ಪ್ರಕಟಿಸಲು, ಕ್ರಮವಹಿಸುವುದು.
6. ಕುಲಪತಿ/ಕುಲಸಚಿವ/ಕುಲಸಚಿವ ಪರೀಕ್ಷಾಂಗ ಅವರುಗಳ ಆಪ್ತ ಸಹಾಯಕರುಗಳಿಗೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
7. ಕಛೇರಿ ಪ್ರತಿ.